

## ಇಂಧನ-ಪ್ರಕಾಶಮಾನ


ಸರ್ಕಾರದ ಯೋಜನೆಗಳು ಜನಪರ, ಜನರಿಗೆ ಅನುಕೂಲ ಹಾಗೂ ನೇರವಾಗಿ ಲಾಭ ತಂದುಕೊಡದೇ ಇದ್ದರೆ ಅದು ಕಾಗದದಲ್ಲೇ ಉಳಿದುಬಿಡುತ್ತದೆ.

ಘೋಷಣೆಗಳಾಚೆಗೆ ಚಿಮ್ಮಿ, ವಾಸ್ತವದಲ್ಲಿ ಅದರ ಫಲ ಗ್ರಾಹಕರಿಗೆ ಸಿಕ್ಕಿದರೆ ಮಾತ್ರ ಸಾರ್ವಜನಿಕರ ತೆರಿಗೆ ಹಣ ಸಾರ್ಥಕ್ಯ ಪಡೆದುಕೊಳ್ಳುತ್ತದೆ. ಘೋಷಣೆಯನ್ನು ಆಚರಣೆಗೆ ಇಳಿಸುವ, ಅನುದಾನವನ್ನು ಪ್ರಯೋಜನವಾಗಿ ಮಾರ್ಪಡಿಸುವ ಕೆಲಸ ಇಂಧನ ಇಲಾಖೆಯಲ್ಲಿ ಸದ್ದಿಲ್ಲದೇ ನಡೆಯುತ್ತಿದೆ. ಇಂಧನ ಸಚಿವ ಡಿ.ಕೆ. ಶಿವಕುಮಾರ್‌ರ ಉತ್ಸಾಹ, ಅಧಿಕಾರಿಗಳು, ಸಿಬ್ಬಂದಿಯ ದಣಿವರಿಯದ ದುಡಿಮೆಯಿಂದಾಗಿ ಇಂಧನ ಇಲಾಖೆ ಪ್ರಕಾಶಮಾನವಾಗಿ ಬೆಳಗಲಾರಂಭಿಸಿದೆ. ಜತೆಗೆ ರಾಜ್ಯದ ಮನೆಮನೆಯನ್ನೂ ಬೆಳಗುತ್ತಿದೆ.

### ದೂರು ದುಮ್ಮಾನಕ್ಕೆ 1912

ಯಾವುದೇ ದೂರುಗಳಿದ್ದರೆ ನೇರವಾಗಿ ಕರೆ ಮಾಡುವ ಟೋಲ್ ಫ್ರೀ ನಂಬರ್ 1912 ನೀಡಲಾಗಿದೆ. 2013ರಲ್ಲಿ ಬೆಸ್ಕಾಂ ವ್ಯಾಪ್ತಿಯ ಬೆಂಗಳೂರಿನಲ್ಲಿ ಮಾತ್ರ ಈ ಸೌಲಭ್ಯ ಜಾರಿಯಲ್ಲಿತ್ತು. ಇದೀಗ ಹುಬ್ಬಳ್ಳಿ, ಕಲಬುರ್ಗಿ, ಮಂಗಳೂರು, ಮೈಸೂರು ವಿದ್ಯುತ್ ಸರಬರಾಜು ಕಂಪೆನಿಗಳಲ್ಲಿ ಈ ಸೌಲಭ್ಯವನ್ನು ಜಾರಿಗೊಳಿಸಲಾಗಿದೆ. ತುರ್ತು ಸಮಸ್ಯೆಗಳಿದ್ದರೆ 3 ಗಂಟೆಯೊಳಗೆ, ಸಾಮಾನ್ಯ ಸಮಸ್ಯೆ ಇದ್ದರೆ 24 ಗಂಟೆಯೊಳಗೆ ಸಮಸ್ಯೆ ಪರಿಹರಿಸುವ ವ್ಯವಸ್ಥೆಯನ್ನು ಇಂಧನ ಇಲಾಖೆ ಜಾರಿಗೊಳಿಸಿದೆ.

## ಮನೆ ಮನೆಗೂ ವಿದ್ಯುತ್



100ಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಎಲ್ಲ ಗ್ರಾಮ ಹಾಗೂ ಜನವಸತಿ ಪ್ರದೇಶಗಳಿಗೆ, ಗ್ರಾಮೀಣ ಪ್ರದೇಶದಲ್ಲಿನ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರ 2005ರಲ್ಲಿ ಜಾರಿಗೊಳಿಸಿರುವ ರಾಜೀವ್ ಗಾಂಧಿ ವಿದ್ಯುದೀಕರಣ ಯೋಜನೆ ಜಾರಿಗೆ ತಂದಿದೆ.

2013ರವರೆಗೆ ಈ ಯೋಜನೆಯಡಿ 2,66,075 ಬಿಪಿಎಲ್ ಕುಟುಂಬಗಳಿಗೆ 16 ವಿದ್ಯುತ್ ರಹಿತ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿತ್ತು. ಅದಾದ ಬಳಿಕ ಈವರೆಗೆ 58 ಗ್ರಾಮ, 12808 ಉಪಗ್ರಾಮ ಹಾಗೂ 876,692 ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿ, ಮನೆಮನೆಯಲ್ಲಿ ಬೆಳಕಿನ ಸಿಂಚನ ಹರಿಸಲಾಗಿದೆ.

## ಗ್ರಾಹಕರ ಸಲಹಾ ಸಮಿತಿ

ವಿದ್ಯುತ್ ಸರಬರಾಜು ಕಂಪೆನಿಗಳಾದ ಬೆಸ್ಕಾಂ, ಹೆಸ್ಕಾಂ,